ಧಾರವಾಡ ಜಿಲ್ಲೆ ಕಲಘಟಗಿಗೆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಹಣ

191(561) ಶ್ರೀ ಚಿಕ್ಕನಗೌಡರ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿಗೆ ಮಂಜೂರಾಗಿರುವ ಹಣ ಎಷ್ಟು;

ಆ) ಯಾವ ಯಾವ ಕಾಮಗಾರಿಗಳಿಗಾಗಿ ಈ ಹಣ ಮಂಜೂರಾಗಿದೆ (ವಿವರ ನೀಡುವುದು);

ಇ) ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಮತ್ತು ಯಾವಾಗ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಪೂರ್ಣಗೊಂಡ ಹಾಗೂ ಅಪೂರ್ಣ ಕಾಮಗಾರಿಗಳ ವಿವರ ನೀಡುವುದು;

ಈ) ಅಪೂರ್ಣಗೊಂಡ ಕಾಮಗಾರಿಗಳಿಗೆ ಇನ್ನೂ ಎಷ್ಟು ಹಣ ಬೇಕಾಗಿದೆ;

ಉ) ಹಾಗಿದ್ದರೆ, ಎಷ್ಟೆಷ್ಟು ಹಣ ಬೇಕಾಗಿದೆ, ಒದಗಿಸುವುದರ ಮೂಲಕ ಯಾವಾಗ ಈ ಕಾಮಗಾರಿಗಳನ್ನು ಮುಗಿಸಿ ಕೊಡಲಾಗುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು ಹಾಗೂ ಯೋಜನಾ ಸಚಿವರು)

ಅ) 2003–04ನೇ ಸಾಲಿನಲ್ಲಿ ಮಂಜೂರಾದ ಮೊತ್ತ ರೂ. 5.75 ಲಕ್ಷಗಳು.

ಆ, ಇ) ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಮಂಡಳಿಯ ಕಾಮಗಾರಿಗಳನ್ನು ಮುಗಿಸಲು 2.00 ಲಕ್ಷ ರೂ. ಗಳು ಹಾಗೂ ನಬಾರ್ಡ್ ಕಾಮಗಾರಿ ಮುಗಿಸಲು 6.59 ಲಕ್ಷ ರೂ. ಗಳು ಬೇಕಾಗಿರುತ್ತದೆ.

ಉ) ಸಂಪನ್ಮೂಲಗಳನ್ನಾಧರಿಸಿ ಅಧ್ಯತೆಯ ಮೇರೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಅನುಬಂಧ–1

ಕಲಘಟಗಿ ತಾಲ್ಲೂಕಿನಲ್ಲಿ 2003–04ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ಲಕ್ಷ ರೂ. ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಖರ್ಚು	ಕಾಮಗಾರಿಯನ್ನು ಮುಗಿಸಲು ಬೇಕಾದ ಮೊತ್ತ	ಮುಕ್ತಾಯ ಗೊಂಡ ದಿನಾಂಕ
	ಮುಕ್ತಾಯಗೊಂಡ ಕಾಮಗಾರಿಗಳು				
1.	ಹುಬ್ಬಳ್ಳಿ ತಾಲ್ಲೂಕು ಅರಳೀಕಟ್ಟೆ ಗ್ರಾಮದಲ್ಲಿ ಪಕ್ಕಾ ಗಟಾರ ನಿರ್ಮಾಣ	1.50	1.50	–	29–7–2003
2.	ಹುಬ್ಬಳ್ಳಿ ತಾಲ್ಲೂಕು ಚಬ್ಬಿ ಗ್ರಾಮದಲ್ಲಿ ಪಕ್ಕಾ ಗಟಾರ ನಿರ್ಮಾಣ	2.00	2.00	–	29–7–2003

1	2	3	4	5	6
	ಪ್ರಗತಿಯಲ್ಲಿರುವ ಕಾಮಗಾರಿಗಳು				
1.	ಹುಬ್ಬಳ್ಳಿ ತಾಲ್ಲೂಕು ಶಿರಗಟ್ಟಿ ಗ್ರಾಮದಲ್ಲಿ ಕೆರೆ ಕೋಡಿ ನೀರು ಹರಿಯುವುದಕ್ಕೆ ತಡೆಗೋಡೆ ನಿರ್ಮಾಣ	2.63	2.13	0.50	ಪ್ರಗತಿಯಲ್ಲಿದೆ
2.	ಹುಬ್ಬಳ್ಳಿ ತಾಲ್ಲೂಕು ಕುರಡೀಕೆರೆ ಗ್ರಾಮದ ಮಲ್ಲಾಪುರ ಹಳ್ಳಕ್ಕೆ ಬಂಡಾರ ನಿರ್ಮಾಣ	2.00	1.50	0.50	ಪ್ರಗತಿಯಲ್ಲಿದೆ
3	ಹುಬ್ಬಳ್ಳಿ ತಾಲ್ಲೂಕು ಕುರಡೀಕೆರೆ ಗ್ರಾಮದ ಮಲ್ಲಾಪುರ ಹಳ್ಳದ ಬಂಡಾರಕ್ಕ ರಕ್ಷಣಾ ಕೆಲಸ	1.00	0.75	0.25	ಪ್ರಗತಿಯಲ್ಲಿದೆ
4.	ಹುಬ್ಬಳ್ಳಿ ತಾಲ್ಲೂಕು ಅದರಗೊಂಚೆ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	1.25	0.90	0.35	ಪ್ರಗತಿಯಲ್ಲಿದೆ
5.	ಬೊಮ್ಮಸಂದ್ರದಲ್ಲಿ ಸಮುದಾಯ ಭವನ ನಿರ್ಮಾಣ	1.50	1.10	0.40	ಪ್ರಗತಿಯಲ್ಲಿದೆ
	ನಬಾರ್ಡ್ ಕಾಮಗಾರಿ				
6.	ಕುಂದಗೋಳ ಕ್ರಾಸ್ ನಿಂದ ಕೋಟಗೊಂಡ ಹುಣಸೆವರೆಗೆ (ಹಳ್ಳಾಳಕ್ಕೆ) 0 ರಿಂದ 6 ಕಿ.ಮೀ. ಮುಖ್ಯ ರಸ್ತೆ ನಿರ್ಮಾಣ	20.00	13.41	6.59	ಪ್ರಗತಿಯಲ್ಲಿದೆ

ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದು

192(402) ಶ್ರೀ ಧ್ರುವನಾರಾಯಣ್ ಆರ್. (ಸಂತೇಮರಳ್ಳಿ) ಮಾನ್ಯ ಉಪ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರುವ ಜಿಲ್ಲೆಗಳಾವುವು: